## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಆಡಳಿತ ಕನ್ನಡ ಭಾಷೆ - ಕನ್ನಡ ಭಾಷೆಯಲ್ಲಿ ಶಾಸನಗಳ ಹಾಗೂ ನಿಯಮಾವಳಿಗಳ ರಚನೆ ಮತ್ತು ಹಿಂದೆ ರಚಿತವಾಗಿರುವ ಶಾಸನಗಳನ್ನು ಮತ್ತು ನಿಯಮಾವಳಿಗಳನ್ನು 1984ರ ಅಂತ್ಯದೊಳಗೆ ಕನ್ನಡಕ್ಕೆ ಭಾಷಾಂತರಿಸಿ 1-1-1985ರಿಂದಾಚೆಗೆ ಶಾಸನ ಸಭೆಯಲ್ಲಿ ತರಲಿರುವ ತಿದ್ದುಪಡಿಗಳನ್ನು ಕನ್ನಡದಲ್ಲೇ ಮಂಡಿಸಲು ಆದೇಶ.

**ಪ್ರಸ್ತಾವನೆ :**

ಕ್ರಮಾಂಕ ಡಿಪಿ.ಎ.ಆರ್ 861 ಎಸ್‌ಜಿ.ಒ 82 ದಿನಾಂಕ 19-1-1983ರ ಆದೇಶದಲ್ಲಿ ಶಾಸಸಗಳು, ವಿಧೇಯಕಗಳು, ನಿಯಮಾವಳಿಗಳು, ನಿಬಂಧನೆಗಳು ಮುಂತಾದವುಗಳನ್ನು ಕನ್ನಡ ಭಾಷೆಯಲ್ಲೇ ರಚಿಸುವುದಕ್ಕಾಗಿ ಕಾನೂನು ಇಲಾಖೆಯಲ್ಲಿ ''ಕನ್ನಡ ಪ್ರಾರೂಪ ಶಾಖೆ'' ಯನ್ನು ಮಂಜೂರು ಮಾಡಲಾಗಿದೆ.

ದಿನಾಂಕ 21-1-1984ರಂದು ನಡೆದ ಆಡಳಿತ ಕನ್ನಡ ಕಾವಲು ಸಮಿತಿಯ 4ನೇ ಸಭೆಯಲ್ಲಿ ಇನ್ನು ಮುಂದೆ ಶಾಸನ ಹಾಗೂ ನಿಯಮಾವಳಿಗಳನ್ನು ಕನ್ನಡದಲ್ಲೇ ರಚಿಸುವುದು ಮತು ಹಾಲೀ ರಾಜ್ಯದಲ್ಲಿ ಜಾರಿಯಲ್ಲಿರುವ ಆಂಗ್ಲಭಾಷೆಯ ಎಲ್ಲ ಶಾಸನ ಮತ್ತು ನಿಯಮಾವಳಿಗಳನ್ನು 1984ರ ಅಂತ್ಯದೊಳಗಾಗಿ ಕನ್ನಡಕ್ಕೆ ಭಾಷಾಂತರಿಸಿ 1985ರ ಜನವರಿಯಿಂದ ಅವುಗಳಿಗೆ ತರುವ ತಿದ್ದುಪಡಿಗಳನ್ನು ಕಡ್ಡಾಯವಾಗಿ ಕನ್ನಡದಲ್ಲೇ ತರಬೇಕೆಂದು ಶಿಫಾರಸು ಮಾಡಿದೆ.

ಈ ಶಿಫಾರಸನ್ನು ಸರ್ಕಾರ ಒಪ್ಪಿದೆ.

ಸರ್ಕಾರಿ ಆದೇಶದ ಸಂಖ್ಯೆ ಡಿಪಿ.ಎ.ಆರ್ 34 ಕೆ.ಒ.ಎಲ್ 84
ಬೆಂಗಳೂರು, ದಿನಾಂಕ 16ನೇ ಜುಲೈ, 1984.

ಪ್ರಯುಕ್ತ

(1) ಸರ್ಕಾರದಿಂದ ಹೊರಡಿಸಲಿಚ್ಛಿಸಿರುವ ಶಾಸನಗಳು, ವಿಧೇಯಕಗಳು, ನಿಯಮಾವಳಿಗಳು, ನಿಬಂಧನೆಗಳು ಮುಂತಾದುವುಗಳನ್ನು ಕನ್ನಡದಲ್ಲೇ ರಚಿಸಿ ಮಂಡಿಸುವಂತೆಯೂ

ಮತ್ತು

(2) ಪ್ರಚಲಿತದಲ್ಲಿರುವ ಆಂಗ್ಲಭಾಷೆಯ ರಾಜ್ಯದ ಎಲ್ಲ ಶಾಸನಗಳನ್ನೂ ವಿಧೇಯಕಗಳನ್ನೂ, ನಿಯಮಾವಳಿಗಳನ್ನೂ ಮತ್ತು ನಿಬಂಧನೆ ಇತ್ಯಾದಿಗಳನ್ನು 1984ರ ಅಂತ್ಯದೊಳಗಾಗಿ ಕನ್ನಡ ಭಾಷೆಗೆ ಭಾಷಾಂತರಿಸಿ.- ಈ ವಿಧೇಯಕ ಮತ್ತು ನಿಯಮಗಳಿಗೆ ತರಲಿರುವ ತಿದ್ದುಪಡಿಗಳನ್ನು 1985ರ ಜನವರಿಯಿಂದ ಕಡ್ಡಾಯವಾಗಿ ಕನ್ನಡದಲ್ಲೇ ಮಂಡಿಸಬೇಕೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಮೈ. ಕೃ. ವೆಂಕಟೇಶನ್

ಅಪರ ಮುಖ್ಯ ಕಾರ್ಯದರ್ಶಿ